ಅಧ್ಯಕ್ಷರು.—ನಿಮಗೆ ಇನ್ನು ಏನು ಸಮಸ್ಯೆಗಳು ಇದ್ದರೂ ಆಮೇಲೆ ಅವರನ್ನು ಕೇಳಿ ತಿಳಿದು ಕೊಳ್ಳಿ. ಈಗ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರ ಗಮನ ಸೆಳೆಯುವ ಸೂಚನೆಯನ್ನು ತೆಗೆದು ಕೊಳ್ಳೋಣ.

(*ii*) *re: Need to take over the Family and Child Welfare Projects under Govt. control and absorbing its staff into Govt. Service.*

SMT. NAGAMMA C KESHAVAMURTHY(Mayakanda).—I call the attention of the Minister of State for Women and Children Welfare to the urgent need for the Government to take over the Family and Child Welfare Projects under the State Government control and to absorb all the staff of these projects into Government service giving them all consequential benefits.

SMT. MANORAMA MADHVARAJ (Minister of State for Women and hild Welfare).—I wish to state as follows.

ಕರ್ನಾಟಕ ರಾಜ್ಯ ಸರ್ಕಾರ ಸಮಾಜ ಕಲ್ಯಾಣ ಸಲಹಾ ಮಂಡಲಿಯು ೩ಳಿ ಕುಟುಂಬ ಮತ್ತು ಮಕ್ಕಳ ಕಲ್ಯಾಣ ಯೋಜನೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ನಡೆಸುತ್ತಲಿದೆ. ಪ್ರಾರಂಭದಲ್ಲಿ ಈ ಎಲ್ಲಾ ಯೋಜನೆಗಳನ್ನು ಕೇಂದ್ರ ಸರಕಾರವು ಕೇಂದ್ರ ಸರ್ಕಾರದ ಸಲಹಾ ಮಂಡಲಿಯ ಮೂಲಕ ನಡೆಸುತ್ತಿತ್ತು. ಇದಕ್ಕೆ ತಗಲುವ ವೆಚ್ಚವನ್ನು ಕೇಂದ್ರ ಪಾಗು ರಾಜ್ಯ ಸರ್ಕಾರಗಳು ವಹಿಸಿಕೊಂಡಿದ್ದವು. ಈ ಯೋಜನೆಗಳಿಗೆ ತಗಲುವ ಪೂರ್ತಿ ವೆಚ್ಚವನ್ನು ೪ನೇ ಪಂಚವಾರ್ಷಿಕ ಯೋಜನೆಯ ನಂತರ ರಾಜ್ಯ ಸರ್ಕಾರಕ್ಕೆ ವಹಿಸಲಾಗಿದೆ. ಇದಕ್ಕೆ ಅನುಸಾರವಾಗಿ, ರಾಜ್ಯ ಸರ್ಕಾರವು ಎಲ್ಲಾ ಯೋಜನೆಗಳಿಗೆ ತಗಲುವ ವೆಚ್ಚ ಮತ್ತು ಸಿಬ್ಬಂದಿ ವರ್ಗದ ವೇತನವನ್ನು ವಹಿಸಿಕೊಂಡಿದೆ.

ಈ ಯೋಜನೆಗಳಲ್ಲಿ ಒಟ್ಟು ೫೪೮ ಜನ ನೌಕರರು ಕೆಲಸ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದಲ್ಲಿ ಆಡಳಿತ ಪಾಗು ಮೇಲ್ವಿಚಾರಣೆ ಜವಾಬ್ದಾರಿಯನ್ನು ರಾಜ್ಯ ಸರ್ಕಾರವೇ ವಹಿಸಿ ಕೊಳ್ಳಲು ಸಲಹೆ ನೀಡಿತ್ತು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ೧೯೭೫ರಲ್ಲಿ ಪ್ರಾರಂಭವಾಗಿದೆ. ಈ ಹೊಸ ಇಲಾಖೆಗೆ ಸಾಕಷ್ಟು ಸಿಬ್ಬಂದಿ ವರ್ಗದ ಕೊರತೆ ಇದ್ದುದರಿಂದ, ಈ ಯೋಜನೆಗಳನ್ನು ಸರ್ಕಾರದ ಆಡಳಿತಕ್ಕೆ ವಹಿಸಿಕೊಳ್ಳುವುದನ್ನು ಮುಂದೂಡಲಾಯಿತು. ಈಗ ಈ ಯೋಜನೆಗಳನ್ನು ಸರ್ಕಾರದ ಆಡಳಿತದಲ್ಲಿ ವಹಿಸಿಕೊಳ್ಳುವ ವಿಷಯ ತೀವ್ರವಾಗಿ ಪರಿಶೀಲಿಸಲಾಗುತ್ತಿದೆ. ಶೀಘ್ರವೇ ಎಲ್ಲಾ ವಿಷಯ ಗಳನ್ನು ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳಲಾಗುತ್ತೆ.

ಈಗ ಈ ಸಿಬ್ಬಂದಿವರ್ಗದವರು ಸರ್ಕಾರಿ ವರ್ಗದವರ ವೇತನವನ್ನೇ ಪಡೆಯುತ್ತಿದ್ದಾರೆ.

ಶ್ರೀಮತಿ ನಾಗಮ್ಮ ಸಿ ಕೇಶವಮೂರ್ತಿ.—ಶೀಘ್ರವೇ ಎಲ್ಲ ವಿಷಯಗಳನ್ನೂ ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದೆಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಈ ವಿಷಯವನ್ನು ನಾನು ಹಿಂದಿನ ವರ್ಷದ ಬೇಡಿಕೆಯ ಮೇಲಣ ಚರ್ಚೆಯಲ್ಲೂ ಪ್ರಸ್ತಾಪ ಮಾಡಿದ್ದೆ. ಇಲಾಖೆಯಲ್ಲಿ ೩೪ ಪ್ರಾಜೆಕ್ಟ್‌ಗಳಿದ್ದು ೫೪೮ ಒಟ್ಟು ಜನ ಸಿಬ್ಬಂದಿ ಇರುವರೆಂದು ಮಾನ್ಯ ಸಚಿವೆಯವರು ತಿಳಿಸಿದರು. ಇವರಲ್ಲಿ ತೊಂಬತ್ತು ಭಾಗ ಮಹಿಳೆಯರಿದ್ದಾರೆ. ಇವರಲ್ಲಿ ಬಹುಪಾಲು ವಿಧವೆಯರು, ಗಂಡ ಬಿಟ್ಟಿರುವವರು ಮತ್ತು ನಿರ್ಗತಿಕರು ಈ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ. ಈಗ ೫೪೮ ಮಂದಿಯಲ್ಲಿ ಈಗ ೪೦ ಮಂದಿ ನಿವೃತ್ತರಾಗಿದ್ದು, ಕಳೆದ ಇಪ್ಪತ್ತಮೂರು ವರ್ಷಗಳಿಂದ ಕೆಲಸ ಮಾಡಿದ ಇವರನ್ನು ಇಂದು ಬರೀ ಕೈಯಲ್ಲಿ ಮನೆಗೆ ಕಳುಹಿಸಲಾಗುತ್ತಿದೆ. ಇವರುಗಳಿಗೆ ಕರ್ನಾಟಕ ಸೇವಾ ನಿಯಮಗಳನ್ನು ಅನ್ವಯಿಸಿ ದ್ದರೂ ನಿವೃತ್ತಿ ವೇತನ ಸೌಲಭ್ಯವನ್ನು ಕೊಟ್ಟಿಲ್ಲ. ಇತ್ತೀಚೆಗೆ ನನಗೊಂದು ವಿಷಯ ತಿಳಿದು ಬಂತು. ಅದೇನೆಂದರೆ, ನೆಲಮಂಗಲದ ಶ್ರೀ ಚಂದ್ರಶೇಖರಯ್ಯ ಎನ್ನುವವರು ಈ ವಿಭಾಗದಲ್ಲಿ ಅಕೌಂಟೆಂಟ್ ಆಗಿ ೨೪ ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಈಗ ಅವರಿಗೆ ಪ್ಯಾರಲಿಸಿಸ್ ಸ್ಟ್ರೋಕ್ ಹೊಡೆದಿದೆ.

ಆತನಿಗೆ ಏಳು ಜನ ಮಕ್ಕಳಿದ್ದಾರೆ. ನಿರ್ಗತಿಕರಾದ ಅವರಿಗೆ ನಿವೃತ್ತಿ ವೇತನವಿಲ್ಲದೆ ಬೀದಿಯಲ್ಲಿ ಬಂದಿರುವ ಪರಿಸ್ಥಿತಿ ಬಂದಿದೆ. ಇದು ಮಹಿಳಾ ಮಂತ್ರು ಮಕ್ಕಳ ಕಲ್ಯಾಣ ಇಲಾಖೆ. ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಯನ್ನು ಮಾಡಲಾಗುವುದೆಂದು ಹೊರಟ ಈ ಇಲಾಖೆ, ಇಲಾಖೆಯಲ್ಲಿರುವ ಮಹಿಳೆಯರ ಮತ್ತು ಮಕ್ಕಳ ಬಗ್ಗೆ ಸಹಾಯಕ್ಕೆ ಬರದಿದ್ದರೆ, ಮತ್ತೆ ಇನ್ನಾರು ಬರಬೇಕು? ಕಳೆದ ಎರಡು ವರ್ಷಗಳಿಂದ ಈ ವಿಭಾಗಕ್ಕೆ ಸರ್ಕಾರದಿಂದ ಗ್ರಾಂಟ್ ರಿಲೀಸ್ ಮಾಡುವುದು ಸ್ವಲ್ಪ ತಡವಾಗುತ್ತಿದೆ ನಾಲ್ಕು ತಿಂಗಳಿಗೊಂದು ಸಲ ಆರೇಳು ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡುತ್ತಿರುವುದರಿಂದ, ಸಾಕಷ್ಟು ಪ್ರಾಜೆಕ್ಟ್‌ಗಳು ನಡೆಯದೆ ಹಾಗೆ ಉಳಿದಿವೆ. ೩ಳಿ ಪ್ರಾಜೆಕ್ಟ್‌ಗಳಿಗೆ ಸುಮಾರು ೪೫ ಲಕ್ಷ ರೂಪಾಯಿಗಳನ್ನು ಹಂಚಬೇಕಾಗಿದೆ. ಆದರೆ, ಕಳೆದೆರಡು ವರ್ಷಗಳಿಂದ ಕೇವಲ ೩೨ ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದರಿಂದ, ಅದು ಬರೀ ಸಿಬ್ಬಂದಿಯ ಸಂಬಳ ಸಾರಿಗೆಗೆ ಖರ್ಚಾಗುತ್ತಿದೆ. ಆದರಲ್ಲೂ ಇದು ಅಂತರರಾಷ್ಟ್ರೀಯ ಮಕ್ಕಳ ವರ್ಷವಾದರೂ ಈ ಇಲಾಖೆಯ ಯಾವ ಪ್ರಾಜೆಕ್ಟ್‌ನಲ್ಲೂ ಮಕ್ಕಳ ಅಭಿವೃದ್ಧಿಗಾಗಿ ಯಾವ ಕಾರ್ಯಕ್ರಮವೂ ನಡೆಯುತ್ತಿಲ್ಲ. ಅಲ್ಲಿ ನ್ಯೂಟ್ರಿಷನ್ ಕಾರ್ಯಕ್ರಮವೂ ನಡೆಯುತ್ತಿಲ್ಲ. ಆದುದರಿಂದ, ಮಾನ್ಯ ಸಚಿವರು ನಾನು ಹೇಳಿದ ಎಲ್ಲ ವಿಚಾರಗಳ ಬಗ್ಗೆ ಆದಷ್ಟು ಬೇಗ ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.—ನಾನು ಮೊದಲೇ ಹೇಳಿದ ಹಾಗೆ, ನಮ್ಮ ಇಲಾಖೆಯಲ್ಲಿ ಸಾಕಷ್ಟು ಸಿಬ್ಬಂದಿ ಇಲ್ಲದಿರುವುದು ಇದಕ್ಕೆ ಸ್ವಲ್ಪ ಕಾರಣವಾಗಿದೆ. ಈಗ ತಾನೇ ಜಿಲ್ಲಾ ಮಟ್ಟದ ಸಿಬ್ಬಂದಿ ವರ್ಗಕ್ಕೆ ಮಂಜೂರಾತಿಯಾಗಿದೆ. ಆದುದರಿಂದ, ಇವನ್ನೆಲ್ಲ ತಕ್ಷಣ ತೆಗೆದುಕೊಂಡು, ಬೇರೆ ಸರ್ಕಾರಿ ನೌಕರರು ಯಾವ ರೀತಿ ನಿವೃತ್ತಿ ವೇತನವನ್ನು ಪಡೆಯುತ್ತಿರುವರೋ ಅದೇ ಪ್ರಮಾಣದಲ್ಲಿ ಈ ವಿಭಾಗದ ನೌಕರರಿಗೂ ನಿವೃತ್ತಿ ವೇತನ ಕೊಡುವುದನ್ನು ಪರಿಶೀಲಿಸುತ್ತೇವೆ.

ಶ್ರೀಮತಿ ಸುಶೀಲ ಚೆಲ್ಲರಾಜ್ — ಮಕ್ಕಳ ಮತ್ತು ಮಹಿಳೆಯ ಅಭಿವೃದ್ಧಿಯ ಉದ್ದೇಶ ವಿಟ್ಟುಕೊಂಡು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ೧೯೭೫ರಲ್ಲಿ ಪ್ರಾರಂಭವಾಗಿದೆ. ಇದರಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ನಿವೃತ್ತಿ ವೇತನವನ್ನು ಒದಗಿಸಿಲ್ಲ. ಆದುದರಿಂದ, ಆದಷ್ಟು ಜಾಗ್ರತೆ ಅವರಿಗೆ ನಿವೃತ್ತಿ ವೇತನ ಸೌಲಭ್ಯವನ್ನು ಕೊಡಬೇಕೆಂದು ಹೇಳಬಯಸುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಇದನ್ನು ಶೀಘ್ರವೇ ಗಮನಿಸುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಇದೇ ಉತ್ತರವನ್ನು ಮಾನ್ಯ ಸಚಿವರು ಹಿಂದೆ ಸಹ ಕೊಟ್ಟಿದ್ದರು. ಇನ್ನು ಒಂದೂವರೆ ತಿಂಗಳೊಳಗೆ ಸುಮಾರು ೧೫೦ ಜನ ಹೆಣ್ಣು ಮಕ್ಕಳು ನಿವೃತ್ತರಾಗುವವರಿದ್ದಾರೆ. ಅವರಿಗೆ ಯಾವುದೇ ಸೌಲಭ್ಯವಿಲ್ಲ. ಆದುದರಿಂದ, ಎಷ್ಟು ದಿವಸದಲ್ಲಿ ಈ ಕಾರ್ಯವನ್ನು ಮಾಡುವರೆಂದು ಅವರು ತಿಳಿಸುವರೆ?

ಶ್ರೀಮತಿ ಮನೋರಮಾ ಮಧ್ವರಾಜ್.—೧೫೦ ಜನ ನಿವೃತ್ತರಾಗುವರೆಂದು ಮಾನ್ಯ ಸದಸ್ಯರು ಹೇಳುತ್ತಿರುವುದು ಸತ್ಯಕ್ಕೆ ದೂರವಾದುದು. ೧೯೭೯ನೇ ವರ್ಷದಲ್ಲಿ ಕೇವಲ ೩ಳು ಮಂದಿ ಮಾತ್ರ ನಿವೃತ್ತರಾಗಲಿರುವರು. ಅವರಿಗೆ ಎಲ್ಲ ಸೌಲಭ್ಯಗಳನ್ನೂ ಒದಗಿಸಲಾಗುವುದು.

ಅಧ್ಯಕ್ಷರು.—ಮಾನ್ಯ ಎಚ್. ಗಂಗಾಧರನ್ ಅವರ ಹೆಸರಿನಲ್ಲಿರುವ ೩೧೨ ನಿಯಮದ ಕೆಳಗೆ ಬರುವ ಪ್ರಸ್ತಾಪವನ್ನು ತಡೆಹಿಡಿಯಲಾಗಿದೆ.

Sale of B.Com. Examination Question Papers

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ನಿನ್ನೆ ನನಗೊಂದು ಪತ್ರ ಬಂದಿದೆ. ಆದರಲ್ಲಿ ಬಿ. ಕಾಂ, ಪರೀಕ್ಷೆಯ ಬ್ಯಾಂಕಿಂಗ್ ಲಾ ಅಂಡ್ ಪ್ರಾಕ್ಟೀಸ್ ವಿಷಯದ ಪ್ರಶ್ನೆ ಪತ್ರಿಕೆಗಳು ಮಾರುಕಟ್ಟೆಯಲ್ಲಿ ಹಂಚಿಕೆಯಾಗುತ್ತಿವೆ ಎಂದು ಹೇಳಿ, ಪ್ರಶ್ನೆ ಪತ್ರಿಕೆಯೊಂದನ್ನು ಯಾರೋ ಕಳುಹಿಸಿ ಕೊಟ್ಟಿದ್ದಾರೆ. ಇದು ಸತ್ಯವೋ ಅಸತ್ಯವೋ ನನಗೆ ಗೊತ್ತಿಲ್ಲ. ಒಂದು ವೇಳೆ ಸತ್ಯವಾಗಿದ್ದರೆ ಕೂಡಲೇ ಶಿಕ್ಷಣ ಮಂತ್ರಿಗಳು ಕ್ರಮ ತೆಗೆದುಕೊಂಡು, ತನಿಖೆ ನಡೆಸಿ, ಇದಕ್ಕೆ ಕಾರಣರಾರೆಂಬುದನ್ನು ಬಹಿರಂಗ ಗೊಳಿಸಿ, ಸಂಬಂಧಪಟ್ಟ ಅಧಿಕಾರಿ ಮೇಲೆ ಕ್ರಮ ಜರುಗಿಸಬೇಕೆಂದು ಹೇಳಬಯಸುತ್ತೇನೆ.